# ಮಹಾಪ್ರವಾದಿ ಗುರುನಾನಕ್

ಎಚ್.ಎಲ್.ಎಸ್. ದತ್

*ಅನುಭಾವಿ ಸಂತರಾಗಿದ್ದ ಗುರುನಾನಕರು ೧೬ನೇ ಶತಮಾನದಲ್ಲಿ ಮಿಂಚಿ ಭಾರತದ ಆಧ್ಯಾತ್ಮಿಕ ಪರಂಪರೆಯನ್ನು ಶ್ರೀಮಂತಗೊಳಿಸಿದವರು. ಅವರ ಜೀವನದ ಕೆಲವು ಅಪೂರ್ವ ಘಟನೆಗಳನ್ನು ಸರಳವಾದ ಶೈಲಿಯಲ್ಲಿ ನಿರೂಪಿಸಿರುವ ಹವ್ಯಾಸಿ ಬರಹಗಾರರಾದ ಎಚ್.ಎಲ್. ಎಸ್. ದತ್‌ರವರು ಮೈಸೂರು ನಿವಾಸಿಗಳು.*

ಮನುಷ್ಯ ತನ್ನ ಆಲೋಚನಾ ಶಕ್ತಿಯಿಂದ ಪ್ರಾಣಿಗಿಂತ ಭಿನ್ನನಾಗಿದ್ದಾನೆ. ಆದರೆ ತನ್ನ ಆ ಶಕ್ತಿಯನ್ನು ಸರಿಯಾಗಿ ಬಳಸಿಕೊಳ್ಳದೆ ಆತ ಸಂಕಷ್ಟಕ್ಕೆ ಗುರಿಯಾಗುತ್ತಾನೆ. ಇದು ಆತನಲ್ಲಿ ಒಂದು ರೀತಿಯ ಕೀಳರಿಮೆ, ದೈನ್ಯ, ದುರ್ಬಲತೆ, ದ್ವೇಷ, ಅಸೂಯೆ, ಅಪನಂಬಿಕೆ ಇವುಗಳಿಗೆ ಕಾರಣವಾಗುತ್ತದೆ. ಇಂತಹ ಮಾನವರ ಅಥವಾ ಮನುಕುಲದ ಏಳಿಗೆಗೆ ತನ್ನ ಜೀವನವನ್ನು ಮುಡಿಪಾಗಿಸಿ ತನ್ನ ಸರ್ವಸ್ವವನ್ನೂ ತ್ಯಜಿಸಿ ಶ್ರಮಿಸುವವನು ಮಹಾತ್ಮ, ಮಹಾಪುರುಷ ಎನ್ನಿಸಿಕೊಳ್ಳುತ್ತಾನೆ. ಇಂತಹ ಮಹಾತ್ಮರ ಪೈಕಿ ೧೬ನೇ ಶತಮಾನದಲ್ಲಿ ಜೀವಿಸಿದ್ದ ಗುರುನಾನಕ್ ಒಬ್ಬರು. ಗುರುನಾನಕ್ ಹುಟ್ಟಿದ್ದು ೧೪೬೯ರಲ್ಲಿ. [*ಈಗ ಅವರ ಜಯಂತಿಯನ್ನು ಕಾರ್ತಿಕ ಪೌರ್ಣಮೆಯಂದು ಆಚರಿಸಲಾಗುತ್ತಿದೆ.*]

ಪಾಕಿಸ್ತಾನದ ಲಾಹೋರ್ ನೈರುತ್ಯಕ್ಕೆ ರಾವಿ ನದಿದಡದಲ್ಲಿ ಇರುವ ತಲವಂಡಿ ಅವರ ಜನ್ಮಸ್ಥಳ. ತಂದೆ ಗ್ರಾಮಲೆಕ್ಕಿಗನಾಗಿದ್ದು, ವ್ಯವಸಾಯ ಮಾಡಿಕೊಂಡಿದ್ದ ಮೆಹತಾ ಕಾಲು, ತಾಯಿ ತೃಪ್ತಾ. ವರ್ಣದಲ್ಲಿ ಕ್ಷತ್ರಿಯರು. ನಾನಕರು ಹುಟ್ಟಿದಾಗಲೇ ಮುಗುಳ್ನಗೆ ಬೀರಿ ಸೂಲಗಿತ್ತಿಯನ್ನು ವಿಸ್ಮಯಗೊಳಿಸಿದ್ದರು. ಕುಲಪುರೋಹಿತ ಹರದಯಾಳ್ ದೇವಾಂಶ ಸಂಭೂತ ಎಂದು ನಾನಕರಿಗೆ ನಮಸ್ಕರಿಸಿದ್ದರು. ಬಾಲ್ಯದಲ್ಲಿಯೇ ನಾನಕರಲ್ಲಿ ಮಹಾಪುರುಷರ ಲಕ್ಷಣಗಳಿದ್ದವು.

ಬಾಲ್ಯದಲ್ಲಿಯೇ ನಾನಕರ ಮನಸ್ಸು ದೈವಚಿಂತನೆ, ನಾಮಸಂಕೀರ್ತನೆ, ಸಾಧುಸಂತರ ಒಡನಾಟವನ್ನು ಅಪೇಕ್ಷಿಸುತ್ತಿತ್ತು. ನಾನಕರಿಗೆ ವಿದ್ಯಾಭ್ಯಾಸ ಆರಂಭವಾದುದು ಅವರ ಏಳನೆಯ ವಯಸ್ಸಿನಲ್ಲಿ. ಲೌಕಿಕ ವಿದ್ಯಾಭ್ಯಾಸದಲ್ಲಿ ನಾನಕರಿಗೆ ರುಚಿ ಹುಟ್ಟಲಿಲ್ಲ. ಹೊಟ್ಟೆ ಹೊರೆಯಲು ನಡೆಸುವ ದೊಂಬರಾಟ ಲೌಕಿಕ ವಿದ್ಯಾಭ್ಯಾಸ ಎಂದು ನಾನಕರು ವಿದ್ಯಾಭ್ಯಾಸವನ್ನು ನಿಲ್ಲಿಸಿದರು. ಹಾಗೆಯೇ "ನಾನಾಗಲೇ ತೃಪ್ತಿಯ ದಾರ, ಕರುಣೆಯ ಹತ್ತಿ, ಅದಕ್ಕೆ ಸಂಯಮವೆಂಬ ಗಂಟುಹಾಕಿದ, ಸತ್ಯವೆಂಬ ಹುರಿಯಿಂದ ಹೊಸೆದಿರುವ ಜನಿವಾರವನ್ನು ಧರಿಸಿದ್ದೇನೆ" ಎಂದು ಉಪನಯನ ಸಂಸ್ಕಾರವನ್ನೂ ತಿರಸ್ಕರಿಸಿದ್ದರು.



ಮಗನು ವಿದ್ಯೆಯೂ ಇಲ್ಲದೆ, ಉದ್ಯೋಗವೂ ಇಲ್ಲದೆ ಉಡಾಳ ಸೋಮಾರಿಯಂತೆ ಕಾಲಹರಣ ಮಾಡುತ್ತಿದ್ದಾನಲ್ಲ ಎಂದು ಚಿಂತಿತನಾದ ತಂದೆ ಮೆಹತಾ ಕಾಲು, ನಾನಕರನ್ನು ಹೊಲ ಕಾಯುವ ಕೆಲಸಕ್ಕೆ ನೇಮಿಸಿದರು. ಎಲ್ಲ ಕೃಷಿಕರಂತೆ ಹೊಲ ಕಾಯಲು ಹೋದ ನಾನಕರು ಸೃಷ್ಟಿಯ ಹಿಂದಿರುವ ಶಕ್ತಿಯ ಬಗ್ಗೆ ಚಿಂತಿಸಲಾರಂಭಿಸಿದರು. ಊರಿನ ದನಕರುಗಳು ಬಂದು ಫಸಲನ್ನು ಮೇಯ್ದುವು. ಕುಪಿತರಾದ ತಂದೆ ನಾನಕರನ್ನು ದನಕರುಗಳನ್ನು ಕಾಯುವ ಕೆಲಸಕ್ಕೆ ನೇಮಿಸಿದರು. ದನ ಕಾಯಲು ಹೋದ ನಾನಕರು ಮರದಡಿಯಲ್ಲಿ ಸುಂದರ ಸೃಷ್ಟಿಯ ಒಡೆಯನಾದ ಭಗವಂತನ ಧ್ಯಾನದಲ್ಲಿ ತನ್ಮಯರಾದರು. ದನಗಳು ಅಕ್ಕಪಕ್ಕದ ಹೊಲಗಳಿಗೆ ನುಗ್ಗಿದ್ದವು. ನೆರೆಹೊರೆಯವರು ಅವರ ದನಗಳನ್ನು ದೊಡ್ಡಿಗೆ ನೂಕಿದರು. ತಂದೆಗೆ ಮಗನದೇ ಚಿಂತೆಯಾಯಿತು. ಅಂಗಡಿಯೊಂದನ್ನು ಹಾಕಿಕೊಟ್ಟು ವ್ಯಾಪಾರಮಾಡಲು ನಾನಕರಿಗೆ ಅಣಿಮಾಡಿಕೊಟ್ಟರು. ವ್ಯಾಪಾರ ಮಾಡಲು ಕುಳಿತ ನಾನಕರು ಇದ್ದುದೆಲ್ಲವನ್ನೂ ಆರುಕಾಸು ಮೂರುಕಾಸಿಗೆ ಮಾರಿ ಬಡಬಗ್ಗರ ಹೊಟ್ಟೆ ತುಂಬಿಸಿದರು.

ಹೀಗೆ ೧೪ ವರ್ಷಗಳು ಕಳೆದವು. ಮಗನಿಗೆ ಮದುವೆ ಮಾಡಿದರೆ ಅವನು ಸರಿದಾರಿಗೆ ಬರಬಹುದೆಂದು ಯೋಚಿಸಿದ ತಾಯಿ ತಂದೆ ಗುರುದಾಸಪುರ ಜಿಲ್ಲೆಯ ಬಾತಲ ಗ್ರಾಮದ ಮೂಲ ಎನ್ನುವವರ ಮಗಳು ಸುಲಕ್ಷಣ ಎನ್ನುವ ಕನ್ಯೆಯೊಂದಿಗೆ ನಾನಕರ ಮದುವೆ ಮಾಡಿದರು. ಆಗ ನಾನಕರಿಗೆ ೧೬ ವರ್ಷ. ದಾಂಪತ್ಯದ ಫಲವಾಗಿ ೧೪೯೪ರಲ್ಲಿ ಶ್ರೀಚಂದ ಎಂಬ ಪುತ್ರನೂ, ೧೪೯೬ರಲ್ಲಿ ಲಕ್ಷ್ಮೀಚಂದನೆಂಬ ಪುತ್ರನೂ ಜನಿಸಿದರು. ಎರಡನೇ ಪುತ್ರ ಲಕ್ಷ್ಮೀಚಂದನು ಜನಿಸಿದ ತರುವಾಯ ನಾನಕರ ಮನಸ್ಸು ಒಳಮುಖ

ವಾಗಲಾರಂಭಿಸಿತು. ನಾನಕರ ಭಕ್ತಿ ಪ್ರೇಮ ಉನ್ಮಾದ ಸ್ಥಿತಿಗೇರಿತು. ಗೃಹ ತ್ಯಜಿಸಿ ಅರಣ್ಯದಲ್ಲಿ ದೇವರ ಧ್ಯಾನದಲ್ಲಿ ಮೈಮರೆಯುತ್ತಿದ್ದರು.

ನಾನಕರ ಹಿರಿಯ ಸೋದರಿ ನಾನಕಿ ಹಾಗೂ ಆಕೆಯ ಗಂಡ ಜಯರಾಮನಿಗೆ ನಾನಕರ ವಿಚಾರವೆಲ್ಲವೂ ತಿಳಿದಿತ್ತು. ಭಾವ ಜಯರಾಮ ಸುಲ್ತಾನಪುರದ ನವಾಬ ದೌಲತ್‌ಖಾನ್ ಲೂದಿಯ ಸಚಿವನಾಗಿದ್ದ. ನಾನಕರ ಮನಃಸ್ಥಿತಿ ಸ್ಥಳ ಬದಲಾವಣೆಯಿಂದ ಪರಿವರ್ತನೆಯಾಗಬಹುದೆಂದು ನಾನಕರನ್ನು ಸುಲ್ತಾನಪುರಕ್ಕೆ ಕರೆಸಿಕೊಂಡು ದೌಲತ್‌ಖಾನ್ ಲೂದಿಯ ಉಗ್ರಾಣ ಮೇಲ್ವಿಚಾರಕನ ಉದ್ಯೋಗಕ್ಕೆ ಸೇರುವಂತೆ ಅಕ್ಕ ನಾನಕಿ ಭಾವ ಜಯರಾಮರ ಮನವೊಲಿಸಿದರು. ೧೫೦೭ರಲ್ಲಿ ಕೆಲಸಕ್ಕೆ ಸೇರಿದ ನಾನಕರು ಮೂರುವರ್ಷಗಳ ಕಾಲ ಉಗ್ರಾಣ ಮೇಲ್ವಿಚಾರಕರಾಗಿ ಕೆಲಸ ನಿರ್ವಹಿಸಿದರು. ನಾನಕರಿಗೆ ವೇತನವಾಗಿ ಕೊಡುತ್ತಿದ್ದ ಧಾನ್ಯವನ್ನು ಸಾಧುಸಂತರಿಗೆ ಫಕೀರರಿಗೆ ಹಂಚಿಬಿಡುತ್ತಿದ್ದರು. ಈ ಕೆಲಸದೊಡನೆಯೇ ನಾನಕರ ಆಧ್ಯಾತ್ಮ ಸಾಧನೆಯು ಮುಂದುವರೆದಿತ್ತು. ಉಗ್ರಾಣದಲ್ಲಿ ಒಮ್ಮೊಮ್ಮೆ ಧಾನ್ಯವನ್ನು ಅಳೆಯುವಾಗ "ತೇರಾ ತೇರಾ" (*ಹದಿಮೂರು ಸಂಖ್ಯೆ*)– ನಿನ್ನದು, ಪರಮಾತ್ಮನದು– ಎಂದು ಹೇಳುತ್ತ ಮೈಮರೆಯುತ್ತಿದ್ದರು.

ಸ್ವಲ್ಪ ದಿವಸಗಳಲ್ಲಿ ಉಗ್ರಾಣ ಮೇಲ್ವಿಚಾರಕನ ಕೆಲಸ ನಾನಕರಿಗೆ ಬೇಸರ ತಂದಿತು. ಅಂದಿನ ಕೆಲಸವನ್ನು ಅಂದೇ ಮಾಡುವ ಸಂಕಲ್ಪವನ್ನು ನಾನಕರು ಹೊಂದಿದ್ದರು. ಒಮ್ಮೊಮ್ಮೆ ಲೆಕ್ಕ ಪತ್ರಗಳನ್ನು ತಯಾರಿಸಲು ಅಪರಾತ್ರಿಯೂ ಆಗುತ್ತಿತ್ತು. ಇನ್ನು ಈ ಕೆಲಸ ಸಾಕು, ಇನ್ನು ಮುಂದೆ ಭಗವಂತನ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತೇನೆ ಎಂದು ನಿಶ್ಚಯಿಸಿದರು. ಒಂದು ದಿನ ಬೆಳಗಿನ ಝಾವದವರೆಗೂ ಕೆಲಸ ಸಾಗಿತ್ತು. ಅಂದು ಕಛೇರಿಯಿಂದ ನೇರ ನದಿಸ್ನಾನಕ್ಕೆ ತೆರಳಿ ನೀರಿನಲ್ಲಿ ಮುಳುಗು ಹಾಕಿದ ನಾನಕರು ಮೇಲೇಳಲೇ ಇಲ್ಲ. ಅವರು ಎದ್ದಿದ್ದು ಮೂರನೆಯ ದಿನ. ನೀರಿನಲ್ಲಿ ಅವರಿಗೆ ಸಮಾಧಿಸ್ಥಿತಿ ಉಂಟಾಗಿತ್ತು. ಭಗವಂತನ ದರ್ಶನವಾಗಿ ಜನಪದದ ನೈತಿಕ ಏಳಿಗೆಗೆ ಶ್ರಮಿಸುವಂತೆ ಆದೇಶವಾಯಿತು. ಆಗ ನಾನಕರಿಗೆ ೩೦ರ ವಯಸ್ಸು. ನಂತರ ಉದ್ಯೋಗ ತ್ಯಜಿಸಿದ ನಾನಕರು ಇದ್ದುದ್ದನ್ನೆಲ್ಲಾ ಬಡಬಗ್ಗರಿಗೆ ಹಂಚಿದರು. ಉಟ್ಟಬಟ್ಟೆಯಲ್ಲಿಯೇ ಹೊರಟರು ಬೈರಾಗಿ, ಭಿಕ್ಷುಕನಂತೆ.

ನಾನಕರ ಕಾಲದಲ್ಲಿ ಪಂಜಾಬ್‌ನಲ್ಲಿ ಹಿಂದೂ ಮುಸಲ್ಮಾನ್ ಮತಗಳೆರಡೂ ಪ್ರಚಲಿತದಲ್ಲಿದ್ದವು. ಕೋಮುಗಳ ಮಧ್ಯೆ ಪರಸ್ಪರ ದ್ವೇಷ, ಅಸೂಯೆಗಳುಂಟಾಗಿ ಜಗಳ ಕದನಗಳು ಆಗಾಗ ನಡೆಯುತ್ತಿದ್ದವು. ನಾನಕರು ಉಭಯ ಮತಗಳ ಸಮಾನ ಧಾರ್ಮಿಕ ಅಂಶಗಳನ್ನು ಎತ್ತಿಹಿಡಿದು ಧರ್ಮಪ್ರಸಾರ ಕಾರ್ಯವನ್ನು ಆರಂಭಿಸಿದರು. ಉಭಯ ಮತಗಳ ಮೂಢ ನಂಬಿಕೆ, ತಪ್ಪುಕಲ್ಪನೆಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದರು.

ನಾನಕರ ಮೊದಲ ಅನುಯಾಯಿ ಅವರ ಗೆಳೆಯ ಮರ್ದಾನ. ಆತ ನಾನಕರಿಗಿಂತ ಹಿರಿಯ ಮತ್ತು ರಿಬಿಕ್(ತಂತಿವಾದ್ಯ) ವಾದ್ಯಗಾರ. ನಾನಕರು ಅವನನ್ನು ತಲವಂಡಿಯಿಂದ ಕರೆಸಿಕೊಂಡರು. ಸತ್ಯ ಪ್ರಾಮಾಣಿಕತೆಯನ್ನು ತಮ್ಮ ಆಶುಕವಿತೆಯ ಮೂಲಕ ಪ್ರಸಾರ ಮಾಡುತ್ತ ಸಂಚಾರ ಹೊರಟರು. ಜನರ ತಪ್ಪುಕಲ್ಪನೆ, ಮೂಢನಂಬಿಕೆಗಳನ್ನು ತಮ್ಮದೇ ವಿಶಿಷ್ಟರೀತಿಯಲ್ಲಿ ತಿದ್ದುತ್ತ, ಸತ್ಯಸಂಧತೆ, ಪ್ರಾಮಾಣಿಕತೆ, ಪ್ರೀತಿ, ವಿಶ್ವಾಸ, ದೈವಭಕ್ತಿಯನ್ನು ಪ್ರಸಾರ ಮಾಡುತ್ತ ಸಂಚಾರ ಹೊರಟರು. ಹೀಗೆ ಸತತವಾಗಿ ೧೫ ವರ್ಷಗಳ ಕಾಲ ಸಂಚರಿಸಿದರು.

ನಾನಕರ ಹರಿದ್ವಾರ ಸಂಚಾರ ಕಾಲದಲ್ಲಿ ಒಮ್ಮೆ ವೈಶಾಖಿ ಜಾತ್ರೆ ನಡೆಯುತ್ತಿತ್ತು. ಗಂಗಾಸ್ನಾನ ಮಾಡಿ ಕೆಲವರು ತಮ್ಮ ಪಿತೃಗಳಿಗೆ ತರ್ಪಣ ನೀಡುತ್ತಿದ್ದರು. "ನಿಮ್ಮ ಪಿತೃಗಳು ಎಲ್ಲಿದ್ದಾರೆ?" ನಾನಕರು ಪ್ರಶ್ನಿಸಿದರು. "ಸ್ವರ್ಗ"ದಲ್ಲಿ ಎಂದು ಬಂತು ಉತ್ತರ. ತಕ್ಷಣ ಪಶ್ಚಿಮಕ್ಕೆ ತಿರುಗಿದ ನಾನಕರು ಬೊಗಸೆಯಲ್ಲಿ ನೀರು ಎರಚಲು ಆರಂಭಿಸಿದರು. "ಪಶ್ಚಿಮಕ್ಕೆ ಏಕೆ ನೀರು ಎರಚುತ್ತಿದ್ದೀರಿ?" ಎಂದು ಜನ ಕೇಳಿದ ಪ್ರಶ್ನೆಗೆ "ದೂರದ ಲಾಹೋರ್ ಬಳಿ ಇರುವ ನನ್ನ ಗ್ರಾಮದ ಗದ್ದೆಗಳಿಗೆ ನೀರು ಹಾಯಿಸುತ್ತಿದ್ದೇನೆ" ಎಂದು ಉತ್ತರ ಬಂತು ನಾನಕರಿಂದ.

"ಅಯ್ಯೋ ಮೂರ್ಖ, ದೂರದ ಲಾಹೋರ್ ಬಳಿ ಇರುವ ಗ್ರಾಮಕ್ಕೆ ಬೊಗಸೆ ನೀರು ಎರಚಿ ನೀರು ಹರಿಸಲಾದೀತೆ?" ಎಂದು ಬುದ್ಧಿವಂತರಂತೆ ಜನ ಪ್ರಶ್ನಿಸಿದಾಗ, "ನೀವು ದೂರದ ಎಲ್ಲೋ ಸ್ವರ್ಗದಲ್ಲಿರುವ ನಿಮ್ಮ ಪಿತೃಗಳಿಗೆ ತರ್ಪಣ ನೀಡಬಹುದಾದರೆ ನೂರಾರು ಗಾವುದ ದೂರವಿರುವ ಗ್ರಾಮಕ್ಕೇಕೆ ನೀರು ಹರಿಸಲಾಗದು?" ಎಂದು ಪ್ರಶ್ನಿಸಿ ಜನರನ್ನು ಬೆಪ್ಪರನ್ನಾಗಿಸಿದರು. ನಂತರ ಅವರಿಗೆ, "ನಿಮ್ಮ ಪಿತೃಗಳು ಜೀವಂತರಿದ್ದಾಗ ಭಕ್ತಿಶ್ರದ್ಧೆಯಿಂದ ಅವರ ಸೇವೆ ಮಾಡಿ. ಅದೇ ಪಿತೃ ತರ್ಪಣ, ಶ್ರಾದ್ಧ" ಎಂದು ಉಪದೇಶಮಾಡಿದರು.

ಇನ್ನೊಮ್ಮೆ ಗ್ರಾಮ ಒಂದಕ್ಕೆ ಸಂಚಾರ ಬಂದಾಗ ಅಲ್ಲಿಯ ಜನ ನಾನಕರನ್ನು ಪ್ರೀತಿ ವಿಶ್ವಾಸದಿಂದ ಆದರಿಸಿದರು. ಅವರಿಗೆ ನಾನಕರು "ನೀವೆಲ್ಲ ಚದುರಿಹೋಗಿರಿ" ಎಂದು ಆಶೀರ್ವದಿಸಿದರು. ಇನ್ನೊಂದು ಗ್ರಾಮದ ಜನ ನಾನಕರನ್ನು ಅಷ್ಟೇನು ಪ್ರೀತ್ಯಾದರಗಳಿಂದ ಗೌರವಿಸಲಿಲ್ಲ. ನಾನಕರು ಅವರಿಗೆ "ನೀವೆಲ್ಲಾ ಇಲ್ಲಿಯೇ ಹೀಗೆಯೇ ಇರಿ" ಎಂದು ಹರಸಿದರು. ಈ ಆಶೀರ್ವಾದಗಳು ಮರ್ದಾನನನ್ನು ತಬ್ಬಿಬ್ಬು ಮಾಡಿತು. "ಗುರುವೇ, ಏನೀ ಆಶೀರ್ವಾದಗಳ ಅರ್ಥ?" ಎಂದು ಪ್ರಶ್ನಿಸಿದ ಮರ್ದಾನ. ಅದಕ್ಕೆ ನಾನಕರು "ಮರ್ದಾನ, ಜನರ ಸೇವೆ ಸತ್ಕಾರ ಮಾಡುವವರು ಚದುರಿಹೋದರೆ ಇತರರಿಗೆ ದಾರಿದೀಪವಾಗುತ್ತಾರೆ. ಅಂತಹ ಸಂಸ್ಕಾರವಿಲ್ಲದವರು ಇದ್ದಲ್ಲಿಯೇ ಇದ್ದರೆ, ಅವರ ಕುಸಂಸ್ಕಾರ ಅಲ್ಲಿಗೆ ಮಾತ್ರ ಸೀಮಿತವಾಗುತ್ತದೆ. ಆದ್ದರಿಂದ ಸಜ್ಜನರು ಚದುರಿಹೋಗಬೇಕು. ದುರ್ಜನರು ಇದ್ದಲ್ಲಿಯೆ ಇರಬೇಕು" ಎಂದರು.

ಮತ್ತೊಮ್ಮೆ ಕಾಶ್ಮೀರಕ್ಕೆ ಪ್ರಯಾಣ ಹೊರಟ ನಾನಕರು ಅಲ್ಲಿಂದ ಹಿಮಾಲಯ ಪ್ರಾಂತ್ಯವನ್ನೆಲ್ಲ ಸಂಚರಿಸಿ, ಹಿಂದಿರುಗುವಾಗ ಗುಡ್ಡದ ಮೇಲಿದ್ದ ಮುಸ್ಲಿಂ ಧರ್ಮಕೇಂದ್ರಕ್ಕೆ ಭೇಟಿಯಿತ್ತರು. ಅಲ್ಲಿಯ ಮುಖ್ಯಸ್ಥ ಬಾಬಾ ವಲಿ. ಅಲ್ಲಿ ನೀರಿನ ಒಂದು ಒರತೆ ಇತ್ತು. ಮರ್ದನನು ಕುಡಿಯಲು ನೀರು ತರಲು ಅಲ್ಲಿಗೆ ಹೋದಾಗ ದರ್ಪಿಷ್ಠ ಬಾಬಾ ವಲಿಯು, ದುರಂಹಕಾರದಿಂದ, "ನಿನ್ನ ಗುರುವು ಮಹಾತ್ಮನಾಗಿದ್ದರೆ, ತಾನಿದ್ದಲ್ಲೇ ನೀರು ಹರಿದು ಬರುವಂತೆ ಮಾಡಲಿ" ಎಂದು ನುಡಿದನು. ಆಗ ನಾನಕರು ಮರ್ದನನಿಗೆ ಸಮೀಪದಲ್ಲಿದ್ದ ಕಲ್ಲೊಂದನ್ನು ಸರಿಸಿ ನೆಲವನ್ನು ಸ್ವಲ್ಪ ಅಗೆಯುವಂತೆ ಸೂಚಿಸಿದರು. ಅದರಂತೆ ಮರ್ದನನು ಮಾಡಿದಾಗ ನೀರು ಚಿಮ್ಮಿತು. ಇದನ್ನು ಅವಮಾನವೆಂದು ಭಾವಿಸಿದ ಆ ಫಕೀರನು ಬಂಡೆಯೊಂದನ್ನು ನಾನಕರ ಮೇಲೆ ತಳ್ಳಿದನು. ನಾನಕರು ಅದನ್ನು ತಮ್ಮ ಕೈಯಲ್ಲಿ ತಡೆದು ನಿಲ್ಲಿಸಿದರು. ಆ ಕಲ್ಲು ಇಂದಿಗೂ ನೀರಿನ ಒರತೆಯ ಮೇಲಿದ್ದು ಪವಿತ್ರಯಾತ್ರಾಸ್ಥಳವಾಗಿದೆ. "ಪಂಜಾ ಸಾಹೀಬ್" ಎಂದು ಪ್ರಖ್ಯಾತವಾಗಿರುವ ಈ ಸ್ಥಳವು ರಾವಲ್‌ಪಿಂಡಿಯಿಂದ ೪೫ ಮೈಲು ದೂರದಲ್ಲಿದೆ.



ನಾನಕ್ ಝರಾ

ನಾನಕರು ತಮ್ಮ ಪ್ರವಾಸದ ಸಮಯದಲ್ಲಿ ದಕ್ಷಿಣಭಾರತಕ್ಕೂ ಆಗಮಿಸಿದ್ದರು. ಆ ಸಂದರ್ಭದಲ್ಲಿ ಅವರು ಬೀದರ್ ಪಟ್ಟಣದ ಹೊರವಲಯದಲ್ಲಿ ಸ್ವಲ್ಪ ಕಾಲ ತಂಗಿದ್ದರು. ಆ ಪ್ರದೇಶದಲ್ಲಿ ಕುಡಿಯುವ ನೀರಿನ ತೀವ್ರ ಕೊರತೆ ಇತ್ತು. ಅಲ್ಲಿಯ ನಾಗರಿಕರು ಮತ್ತು ಫಕೀರರು ನಾನಕರೆಡೆಗೆ ಬಂದು ನೀರಿನ ಸಮಸ್ಯೆಯ ಪರಿಹಾರಕ್ಕಾಗಿ ಅವರನ್ನು ಪ್ರಾರ್ಥಿಸಿದರು. ಜನರ ಸಂಕಟದಿಂದ ತೀವ್ರವಾಗಿ ನೊಂದ ನಾನಕರು ಗುಡ್ಡದ ತಳಭಾಗದಲ್ಲಿ ದೇವರನ್ನು ಪ್ರಾರ್ಥಿಸುತ್ತ ಬಲಗಾಲ ಹೆಬ್ಬೆರಳನ್ನು ನೆಲಕ್ಕೆ ಒತ್ತಿದರು. ಕೂಡಲೆ ಒಂದು ನೀರಿನ ಝರಿ ಮೇಲೆದ್ದಿತು. ಮುಂದೆ ಆ ಸ್ಥಳದಲ್ಲಿ ಒಂದು ಮಂಟಪ ನಿರ್ಮಾಣವಾಯಿತು. ಇದರಿಂದಲೇ ಈ ಕ್ಷೇತ್ರಕ್ಕೆ "ನಾನಕ್ ಝರಾ" ಎಂದು ಹೆಸರಾಯಿತು. ಸಿಖ್ಖರು ಆ ಸ್ಥಳವನ್ನು "ದುಜಾ ಪಂಜಾಬ್" ಎಂದು ಕರೆಯುವರು. ಬೀದರ್‌ನಲ್ಲಿ ಈಗ ಒಂದು ಪ್ರಸಿದ್ಧ ಗುರುದ್ವಾರವಿದ್ದು ಅದು ಸಿಖ್ಖರಿಗೆ ಪವಿತ್ರವಾದ ಯಾತ್ರಾಸ್ಥಳವಾಗಿದೆ.

ನಾನಕರು ಅಂತಿಮ ಪ್ರವಾಸ ಕೈಗೊಂಡಿದ್ದು ೧೫೧೮ರಲ್ಲಿ. ಮಹಮದೀಯರಂತೆ ವೇಷ ಧರಿಸಿದ್ದ ನಾನಕರು ಮೆಕ್ಕಾಕ್ಕೆ ಬಂದಿದ್ದರು. ನಡೆದೇ ಸಂಚರಿಸುತ್ತಿದ್ದ ನಾನಕರ ಕಾಲುಗಳೆಲ್ಲಾ ಒಡೆದು ಹೊಪ್ಪಳೆಗಳೆದ್ದಿದ್ದವು. ವಿಶಾಲವಾದ ಮಸೀದಿಯ ಪ್ರಾಂಗಣದ ನೆರಳಿಗೆ ಬಂದೊಡನೆಯೇ ನಿದ್ರೆ ಆವರಿಸಿತು. ಮೈ ಚೆಲ್ಲಿ ಒರಗಿದ ನಾನಕರ ಪಾದಗಳು ಪವಿತ್ರ ಕಾಬಾ ಶಿಲೆಯತ್ತ ಚಾಚಿದ್ದವು. ಈ ಮಹದಪಚಾರವನ್ನು ಕಂಡು ಮಸೀದಿ ಮುಖ್ಯಸ್ಥ ಝಾಡಿಸಿ ಒದ್ದು ನಾನಕರನ್ನು ಎಚ್ಚರಿಸಿದ. ಎಚ್ಚರಗೊಂಡ ನಾನಕರು ವಿನಯದಿಂದಲೇ "ಅಯ್ಯಾ, ಬಹುದೂರದ ಕಾಲ್ನಡಿಗೆಯಿಂದ ದಣಿದಿದ್ದೇನೆ. ಎಲ್ಲಿ ದೇವರಿಲ್ಲವೋ ಅತ್ತ ಕಡೆ ನನ್ನ ಕಾಲುಗಳನ್ನು ಎಳೆದು ಸರಿಸು" ಎಂದರು. ಅವನು ಒರಟಾಗಿ ಅವರನ್ನು ದರದರನೆ ಇನ್ನೊಂದು ಬದಿಗೆ ಎಳೆದ. ಅಲ್ಲಿಯೂ ಕಾಬಾ ಶಿಲೆ ಕಾಣಿಸಿತು. ಮತ್ತೊಂದು ಕಡೆ ಎಳೆದ, ಅಲ್ಲಿಯೂ ಕಾಬಾ ಶಿಲೆ ಪ್ರತ್ಯಕ್ಷವಾಯಿತು. ಅವನು ಎತ್ತೆತ್ತ ಎಳೆದರೂ ಅಲ್ಲಿ ಪವಿತ್ರ ಕಾಬಾ ಶಿಲೆ ಕಾಣಿಸಿತು. ಇದರಿಂದ ಗಾಬರಿಗೊಂಡ ಮುಲ್ಲಾ ಪಶ್ಚಾತ್ತಾಪದಿಂದ ನಾನಕರಲ್ಲಿ ಕ್ಷಮೆಯಾಚಿಸಿದ. ಆಗ ಅಲ್ಲಿ ವಿಪರೀತ ಯಾತ್ರಾರ್ಥಿಗಳು ಸೇರಿದ್ದರು. ಅವರಲ್ಲೊಬ್ಬ ಹಿರಿಯ ಮುಲ್ಲಾ ನಾನಕರನ್ನು "ನೀನು ಯಾರು? ನಿನ್ನ ಧರ್ಮ ಯಾವುದು? ನೀನು ಹಿಂದುವೋ, ಮುಸಲ್ಮಾನನೋ?" ಎಂದು ಪ್ರಶ್ನಿಸಿದ. ಅದಕ್ಕೆ ನಾನಕರು "ಧರ್ಮ ಮುಖ್ಯವಲ್ಲ, ಸನ್ಮಾರ್ಗದಲ್ಲಿ ನಡೆಯದಿದ್ದರೆ ಎರಡೂ ಧರ್ಮದವರು ನಾಶವಾಗುತ್ತಾರೆ" ಎಂದರು.

ನಾನಕರು ಅಲ್ಲಿಂದ ಮುಂದೆ ಮದೀನಾಕ್ಕೆ ಪ್ರಯಾಣ ಹೊರಟರು. ನಾನಕರು ಮದೀನಾ ತಲುಪಿದಾಗ ಅಲ್ಲಿಯೂ ವಿಪರೀತ ಯಾತ್ರಾರ್ಥಿಗಳ ಸಂದಣಿ ಸೇರಿತ್ತು. ಅಲ್ಲಿಯೂ ಗಟ್ಟಿಯಾಗಿ ಪ್ರಾರ್ಥಿಸಲಾರಂಭಿಸಿದರು. ಅಲ್ಲಿದ್ದ ಮಸೀದಿಯ ಒಡೆಯ "ನೀನು ಯಾರು? ಎಲ್ಲಿಂದ ಬಂದಿದ್ದೀಯಾ?" ಎನ್ನಲು, ನಾನಕರು ಮೊದಲ ಬಾರಿಗೆ ತಾವಾರೆಂದು ತಮ್ಮ ಜನ್ಮದ ಕಾರಣವನ್ನು ತಿಳಿಸುತ್ತಾ, "ಜನರಿಗೆ ಧರ್ಮಮಾರ್ಗದಲ್ಲಿ ಬಂಧುವಾಗಲು ಜನಿಸಿದವನು ನಾನು. ನನಗೆ ಜಾತಿ, ಮತಗಳಿಲ್ಲ. ದೇವರು ಒಬ್ಬನೇ. ಅವನು ಎಲ್ಲೆಲ್ಲಿಯೂ ಇದ್ದಾನೆ" ಎಂದರು. ಮದೀನಾದಿಂದ ಬಾಗ್ದಾದಿಗೆ ಬಂದ ನಾನಕರು ಅಲ್ಲಿಯೂ ಗಟ್ಟಿಯಾಗಿ ಪ್ರಾರ್ಥಿಸಿದರು. ಅವರ ಭೇಟಿ ನೀಡಿದ ಸ್ಮರಣಾರ್ಥ ಅವರ ಏಳು ಜನ ಭಕ್ತರಿಂದ "ಬಾಬಾ ನಾನಕ್ ಫಕೀರ್ ಜೌಲಿಯಾನ್" ಎಂಬ ದೇವಾಲಯ ನಿರ್ಮಾಣವಾಯಿತು.

೧೫೨೧ರ ಅಂತ್ಯದಲ್ಲಿ ಕರ್ತಾರಪುರಕ್ಕೆ ಬಂದ ನಾನಕರು ತಮ್ಮ ಜೀವಿತಾವಧಿಯ ಕೊನೆಯ ದಿನಗಳನ್ನು ಅಲ್ಲಿಯೇ ಕಳೆದರು. ನಾನಕರಿಗೆ ತಮ್ಮ ಜೀವಿತಾವಧಿಯು ಪೂರ್ಣವಾಯಿತು ಎನ್ನಿಸಿತು. ಖದೂರ್ ಎಂಬಲ್ಲಿ ದುರ್ಗಾ ದೇವಸ್ಥಾನದಲ್ಲಿ ಅರ್ಚಕನಾಗಿದ್ದ ಭಾಯಿ ಲೆಹ್ನಾ ಎಂಬಾತನನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ನೇಮಿಸಲು ನಿಶ್ಚಯಿಸಿದರು. ಒಂದು ಶುಭದಿನದಲಿ ಭಾಯಿ ಲೆಹ್ನಾನನ್ನು ಪೀಠದ ಮೇಲೆ ಕೂರಿಸಿ, ಆತನ

ಹಸ್ತದಲ್ಲಿ ಒಂದು ತೆಂಗಿನಕಾಯಿ, ಐದು ನಾಣ್ಯಗಳನ್ನು ಇಟ್ಟು, ಶಿಷ್ಯನಿಗೆ ಪ್ರದಕ್ಷಿಣೆ ಬಂದು, "ಇಂದಿನಿಂದ ಗುರುಶಿಷ್ಯರಿಗೆ ಭೇದವಿಲ್ಲ. ನಾನೇ ನೀನು, ನೀನೇ ನಾನು" ಎಂದು ಘೋಷಿಸಿದರು. "ಗುರು ಅಂಗದ" ಎಂದು ಆತನಿಗೆ ಹೆಸರನ್ನಿಟ್ಟರು. ಈ ಶಿಷ್ಯ ಸ್ವೀಕಾರ ಸಮಾರಂಭ ೧೫೩೮ರ ಸೆಪ್ಟೆಂಬರ್‌ನಲ್ಲಿ ಐದು ದಿನ ಸಂಭ್ರಮದಿಂದ ನಡೆಯಿತು. ಶಿಷ್ಯ ಸ್ವೀಕಾರದ ನಂತರ ನಾನಕರು ಹೆಚ್ಚೆಚ್ಚು ಅಂತರ್ಮುಖಿಗಳಾಗುತ್ತಿದ್ದರು. ಆಗಾಗ ಸಮಾಧಿಸ್ಥಿತಿಗೂ ತಲುಪುತ್ತಿದ್ದರು. ನಾನಕರಿಗೆ ಆಗ ೭೦ರ ವಯಸ್ಸು.

ಒಂದು ದಿನ ಶಿಷ್ಯರೆಲ್ಲರೂ ನಾಮಸಂಕೀರ್ತನೆಯಲ್ಲಿ ತೊಡಗಿರಲು ಭೌತಿಕ ಶರೀರವನ್ನು ವಿಸರ್ಜಿಸಿ ನಾನಕರು, ವಿಶ್ವವ್ಯಾಪಿಯಾದರು. ಅವರ ಮಹಾನಿರ್ಯಾಣದ ನಂತರ ಅವರ ಹಿಂದೂ ಮುಸ್ಲಿಂ ಶಿಷ್ಯರಲ್ಲಿ ನಾನಕರ ಕಳೇಬರವನ್ನು ದಹನ ಮಾಡಬೇಕೋ ಅಥವಾ ದಫನ ಮಾಡಬೇಕೋ ಎಂಬ ಜಿಜ್ಞಾಸೆ ಏರ್ಪಟ್ಟಿತು. ಹಿರಿಯರೊಬ್ಬರು, ನಾನಕರ ಕಳೇಬರದ ಮೇಲೆ ವಸ್ತ್ರವನ್ನು ಹೊದಿಸಿ, ಒಂದೊಂದು ಕಡೆ ಹಿಂದೂಗಳೂ ಮುಸ್ಲಿಮರೂ ಪುಷ್ಪಗಳನ್ನಿಡಬೇಕು, ಮಾರನೆ ದಿನ ಯಾರಿಟ್ಟ ಪುಷ್ಪಗಳು ಬಾಡಿರುವುದಿಲ್ಲವೊ, ಆ ಸಂಪ್ರದಾಯದಂತೆ ಸಂಸ್ಕಾರ ನಡೆಸುವಂತೆ ಸೂಚಿಸಿದರು. ಇದು ಇಬ್ಬರಿಗೂ ಒಪ್ಪಿಗೆಯಾಯಿತು. ಅದರಂತೆ ಬೇರೆ ಬೇರೆ ಪುಷ್ಪಗಳನ್ನಿಟ್ಟರು.

ಮರುದಿನ ನಾನಕರ ಕಳೇಬರದ ಮೇಲಿದ್ದ ವಸ್ತ್ರದ ಮೇಲಿದ್ದ ಯಾವ ಪುಷ್ಪಗಳೂ ಬಾಡಿರಲಿಲ್ಲ. ವಸ್ತ್ರವನ್ನು ಸರಿಸಿ ನೋಡಿದಾಗ, ಅಲ್ಲಿ ನಾನಕರ ಶರೀರವಿರಲಿಲ್ಲ. ಎಲ್ಲರಿಗೂ ಅತ್ಯಾಶ್ಚರ್ಯ! ಶಿಷ್ಯರು ಹೊದೆಸಿದ್ದ ವಸ್ತ್ರವನ್ನು ಹರಿದು ಭಾಗ ಮಾಡಿಕೊಂಡು ಹಿಂದೂಗಳು ಸಂಸ್ಕಾರವನ್ನೂ, ಮುಸ್ಲಿಮರು ದಫನವನ್ನೂ ನಡೆಸಿದರು. ನಾನಕರಿಗೆ ಹೊದೆಸಿದ್ದ ವಸ್ತ್ರದ ದಹನ, ದಫನವಾದ ಸ್ಥಳದಲ್ಲಿ ಕ್ರಮವಾಗಿ ಹಿಂದೂಗಳು ದೇವಾಲಯವನ್ನೂ, ಮುಸಲ್ಮಾನರು ಮಸೀದಿಯನ್ನೂ ನಿರ್ಮಿಸಿದರು. ಆದರೆ ಹಿಂದೂ ಮುಸ್ಲಿಂ ಮತಗಳ ಸುವರ್ಣಸೇತುವೆಯಾಗಿದ್ದ ನಾನಕರು ಯಾವಾಗಲೂ ಹೇಳುತ್ತಿದ್ದ "ನಾನು ಯಾವ ಮತಕ್ಕೂ ಸೇರಿದವನಲ್ಲ, ವಿಶ್ವಮಾನವ" ಎಂಬುದನ್ನು ದೃಢಪಡಿಸಲು ರಾವೀ ನದಿಯಲ್ಲಿ ದೊಡ್ಡಪ್ರವಾಹ ಏರ್ಪಟ್ಟು ಎರಡೂ ಸ್ಮಾರಕಗಳು ಕೊಚ್ಚಿಕೊಂಡುಹೋದವು.

ನಾನಕರು ಹುಟ್ಟುಹಾಕಿದುದು ಸಿಖ್‌ಪಂಥ. ಸಿಖ್ ಎಂದರೆ ದೇವರ ಜ್ಞಾನಕ್ಕಾಗಿ ಧರ್ಮವನ್ನು ಆಚರಿಸುವವನು ಎಂದು. ಪವಾಡಗಳು ಭಗವಂತನ ಅಸ್ತಿತ್ವವನ್ನು ತಿರಸ್ಕರಿಸುವ ಕ್ಷುದ್ರ ಕ್ರಿಮಿಗಳು ಎಂದು ತಿರಸ್ಕರಿಸಿದ ನಾನಕರು, ಸತ್ಯಾನ್ವೇಷಣೆಗೆ ಕ್ರಿಯಾಶೀಲ ಭಕ್ತಿಯೇ ದಾರಿ ಎಂದು ಸಾರಿದರು. ತಮ್ಮ ಸರಳ ವ್ಯಕ್ತಿತ್ವ, ನೇರ ನಡೆನುಡಿಯಿಂದ ತಮ್ಮ ಅನುಯಾಯಿಗಳನ್ನು ಪ್ರೀತಿ, ವಿಶ್ವಾಸ, ಪ್ರೇಮ, ಸೋದರಭಾವ, ಸತ್ಯ, ಪ್ರಾಮಾಣಿಕತೆಯಿಂದ ಒಂದುಗೂಡಿಸಿ ಒಂದು ಬಲಿಷ್ಠ ಜನಾಂಗದ ನಿರ್ಮಾಣಕ್ಕೆ ಕಾರಣರಾದರು.

ಅನುಭಾವಿ ಸಂತರಾಗಿದ್ದ ನಾನಕರ ಉಪದೇಶಗಳು ಸುಲಭಗ್ರಾಹ್ಯವಾಗಿವೆ. ಪ್ರಪಂಚದ ಪ್ರವಾದಿಗಳಲ್ಲಿ ನಾನಕರಂತೆ ಧರ್ಮಪ್ರಸಾರ ಕಾರ್ಯ ಕೈಗೊಂಡ ಪ್ರವಾದಿಗಳು ಅತ್ಯಂತ ಅಪರೂಪ ಎಂದರೆ ಅತಿಶಯವಲ್ಲ.

## ನಾನಕ ವಾಣಿ

- ಲೋಭವೇ ಹೃದಯದ ಅಶುದ್ಧಿ; ಅಸತ್ಯವಚನ ನಾಲಗೆಯ ಅಶುದ್ಧಿ; ಇತರರ ಹಣದ ಕಡೆ ದೃಷ್ಟಿಯಿಡುವುದು ಮತ್ತು ಪರಪತ್ನಿಯ ಸೌಂದರ್ಯದ ಕಡೆ ನೋಡುವುದು ಕಣ್ಣಿನ ಅಶುದ್ಧಿ; ಪರನಿಂದೆಯನ್ನು ಕೇಳುವುದು ಕಿವಿಯ ಅಶುದ್ಧಿ.
- ಮನವೆಂಬ ಕಲ್ಲಿನ ಮೇಲೆ ನಾಮವೆಂಬ ಗಂಧದ ಕೊರಡನ್ನು ಉಜ್ಜಿ, ಅದಕ್ಕೆ ಸತ್ಕರ್ಮವೆಂಬ ಪರಿಮಳವನ್ನು ಬೆರೆಸಿ ಅದರ ಮೂಲಕ ನಿಮ್ಮಂತರಂಗದಲ್ಲಿರುವ ಭಗವಂತನನ್ನು ಪೂಜಿಸಿ.
- ಬರೀ ದೇಹಶುದ್ಧಿಯುಳ್ಳವರು ನಿಜವಾಗಿ ಪರಿಶುದ್ಧರಲ್ಲ. ಯಾರ ಹೃದಯದಲ್ಲಿ ಭಗವಂತನು ನೆಲೆಸಿರುವನೊ ಅವನೇ ಪರಿಶುದ್ಧನು.
- ದಯೆಯೇ ನಿಮ್ಮ ಮಸೀದಿಯಾಗಲಿ, ಶ್ರದ್ಧೆಯೇ ನಿಮ್ಮ ಪ್ರಾರ್ಥನಾ ಆಸನವಾಗಲಿ, ಪ್ರಾಮಾಣಿಕ ಜೀವನವೇ ನಿಮ್ಮ ಕೊರಾನ್ ಆಗಲಿ, ತೃಪ್ತಿಯೇ ನಿಮ್ಮ ಉಪವಾಸವಾಗಲಿ. ಆಗಲೆ ನೀವು ನಿಜವಾದ ಮುಸ್ಲಿಮರು.
- ಹೂವಿನಲ್ಲಿ ಸುವಾಸನೆ ಅಡಗಿರುವಂತೆ, ಕನ್ನಡಿಯಲ್ಲಿ ಪ್ರತಿಬಿಂಬವಿರುವಂತೆ ಭಗವಂತನು ನಿಮ್ಮಲ್ಲಿ ನೆಲೆಸಿರುವನು. ಹೊರಗೇಕೆ ಅವನನ್ನರಸುವೆ?
- ಸದ್ಗುಣಗಳ ನೀರಿನಲ್ಲಿ ಸ್ನಾನಮಾಡಿ, ನಿಮ್ಮ ದೇಹಕ್ಕೆ ಸತ್ಯದ ಸುಗಂಧವನ್ನು ಬಳಿದುಕೊಳ್ಳಿ. ಆಗ ನಿಮ್ಮ ಮುಖ ಕಾಂತಿಯಿಂದ ಬೆಳಗುವುದು ಮತ್ತು ವರದನು ನಿಮಗೆ ನೂರಾರು ಸಾವಿರಾರು ಕಾಣಿಕೆಗಳನ್ನು ನೀಡುವನು.
- ಓ ಪ್ರಭು, ಸತ್ಕರ್ಮಗಳನ್ನು ಆಚರಿಸದೆ ಯಾರೂ ನಿನ್ನ ಭಕ್ತರಾಗಲಾರರು.
- ಸತ್ಕರ್ಮವೆಂಬ ಹೊಲದಲ್ಲಿ ಭಗವನ್ನಾಮವೆಂಬ ಬೀಜವನ್ನು ಬಿತ್ತಿ, ಸತ್ಯವೆಂಬ ನೀರನ್ನು ಹಾಯಿಸಿ. ಆಗ ಶ್ರದ್ಧೆಯ ಚಿಗುರೊಡೆಯುವುದು ಮತ್ತು ಕಡುಮೂರ್ಖನಿಗೂ ನಾಕ-ನರಕಗಳ ಭೇದ ತಿಳಿದುಬರುತ್ತದೆ.